## 3. ಸೌರಶಕ್ತಿಯೇ ಸ್ವಚ್ಛ, ನಿಶ್ಚಿತ, ವಿಶ್ವಕ್ಕೆ ಆಧಾರ

21ನೇ ಶತಮಾನದಲ್ಲಿ ಸೌರಶಕ್ತಿ ಒಂದು ಪ್ರಧಾನವಾದ ಇಂಧನವಾಗಿ ಬಳಕೆಗೆ ಬರಲಿದೆ. ಅದೊಂದು ಸ್ವಚ್ಛ, ನಿಶ್ಚಿತ, ಸುರಕ್ಷಾ ಇಂಧನ ಮಾದರಿಯಾಗಲಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಮಧ್ಯಪ್ರದೇಶದ ರೇವಾದಲ್ಲಿ ನೂತನವಾಗಿ ನಿರ್ಮಿಸಲಾದ ಏಷ್ಯಾದ ಅತಿ ದೊಡ್ಡ ಸೋಲಾರ್ ಪಾರ್ಕ್ ಎನಿಸಿರುವ ರೇವಾ ಅಲ್ಟ್ರಾ ಮೆಗಾ ಸೋಲಾರ್ ಪವರ್ ಯೋಜನೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಲೋಕಾರ್ಪಣೆ ಮಾಡಿದ ಅವರು ನರ್ಮದಾ ನದಿ ಹಾಗೂ ಬಿಳಿ ಹುಲಿಗಳಿಂದಾಗಿ ವಿಶೇಷವಾಗಿ ಗುರುತಿಸಿಕೊಂಡಿದ್ದ ರೇವಾ ಪ್ರಾಂತ್ಯಕ್ಕೀಗ ಏಷ್ಯಾದಲ್ಲೇ ಅತಿ ದೊಡ್ಡ ಸೋಲಾರ್ ಪ್ರಾಂತ್ಯವುಳ್ಳ ಕ್ಷೇತ್ರವೆಂಬ ಹೆಗ್ಗಳಿಕೆಯೂ ಬಂದಿದೆ. ಈ ಮೂಲಕ, ಈ ಪ್ರಾಂತ್ಯ ಹೊಸ ಇತಿಹಾಸ ಬರೆದಿದೆ. ಇಲ್ಲಿ ತಲೆ ಎತ್ತಿರುವ 750 ಮೆಗಾವ್ಯಾಟ್‌ನ ಈ ಬೃಹತ್ ಪಾರ್ಕ್, ಇಡೀ ವಿಶ್ವವೇ ಮುಂದೊಂದು ದಿನ ಸೋಲಾರ್ ಇಂಧನವನ್ನು ಬಲವಾಗಿ ಅವಲಂಬಿಸುವುದಕ್ಕೆ ಹಾಕಲಾದ ಆಡಿಪಾಯ ಎಂದು ಬಣ್ಣಿಸಿದರು.

ಇಂಥದ್ದೊಂದು ಬೃಹತ್ ಶಕ್ತಿಯ ಆಗರಕ್ಕೆ ತಮ್ಮಲ್ಲಿ ತಲೆಯೆತ್ತಲು ಸ್ಥಾನಕೊಟ್ಟ ರೇವಾ ಜನತೆಗೆ ಹಾಗೂ ಮಧ್ಯಪ್ರದೇಶ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಈ ಸೌರ ಇಂಧನದ ಶಕ್ತಿ ಕೇಂದ್ರವಾಗಿ ಬದಲಾಗುತ್ತದೆ ಎಂದರು.

**ಸ್ವಚ್ಛ ಇಂಧನಕ್ಕೆ ಜಾಗತಿಕ ಮಾರುಕಟ್ಟೆ ಭಾರತ:–** ಭಾರತವು ಸ್ವಚ್ಛ ಇಂಧನಕ್ಕೆ ಜಾಗತಿಕ ಮಾರುಕಟ್ಟೆಯಾಗಿ ಬದಲಾಗಿದೆ. ಸೌರಶಕ್ತಿ ಸಂಬಂಧಿತ ಕ್ಷೇತ್ರಗಳಲ್ಲಿ ಹೂಡಿಕೆಗೆ ಸೂಕ್ತವಾದ ತಾಣವಾಗಿ ಬದಲಾಗಿದೆ. ಇಡೀ ಜಗತ್ತು ತಮ್ಮ ಆರ್ಥಿಕತೆಯನ್ನು ಕಾಪಾಡಿಕೊಳ್ಳಬೇಕೋ, ಪರಿಸರವನ್ನು ಸಂರಕ್ಷಿಸಬೇಕೋ ಎಂಬ ದ್ವಂದ್ವದಲ್ಲಿ ಸಿಲುಕಿದೆ. ಆದರೆ, ಭವಿಷ್ಯದ ದೃಷ್ಟಿಯಲ್ಲಿ ಜಗತ್ತು ಸೌರಶಕ್ತಿಯ ಮೇಲೆ ಅವಲಂಬಿತವಾಗುವುದೇ ಉತ್ತಮ. ಅದು ಇಡೀ ವಿಶ್ವಕ್ಕೆ ಇಂಧನ ಭದ್ರತೆಯನ್ನು ನೀಡಬಲ್ಲದು. ಜೊತೆಗೆ ಪರಿಸರವನ್ನು ಕಾಪಾಡಲೂ ಇದು ನೆರವಾಗಲಿದೆ. ಆತ್ಮನಿರ್ಭರ ಭಾರತ ಕನಸಿನಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನಾ ವಲಯವನ್ನೂ ಸ್ವಾವಲಂಬಿಯನ್ನಾಗಿಸುವ ಗುರಿಯನ್ನು ಹೊಂದಲಾಗಿದೆ. ಈ ಗುರಿಯಲ್ಲಿ ಸೌರಶಕ್ತಿಯ ಉತ್ಪಾದನೆ ಪ್ರಮುಖವಾದ ಅಂಶವಾಗಿರಲಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:04.07.2020